# ದಿನಾಂಕ:30-04-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 01/2011-12

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"2011-12ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿಯಲ್ಲಿ ದಿನಾಂಕ:30-04-2011 ರ ಒಳಗಾಗಿ ಕಂದಾಯ ಪಾವತಿಸುವ ತೆರಿಗೆದಾರರಿಗೆ ಶೇಕಡ 5% ರಷ್ಟು ರಿಯಾಯಿತಿಯನ್ನು ನೀಡಿದ್ದು, ಸದರಿ ರಿಯಾಯಿತಿಯ ಅವಧಿಯು ದಿನಾಂಕ:30-04-2011 ರಂದು ಕೊನೆಗೊಳ್ಳಲಿದ್ದು, ನಗರದ ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ:30-05-2011 ರವರೆಗೆ ಕಂದಾಯಪಾವತಿಸುವವರಿಗೆ ತೆರಿಗೆಯಲ್ಲಿ ಶೇಕಡ 5% ರಷ್ಟು ರಿಯಾಯಿತಿಯನ್ನು ಸರ್ಕಾರದ ಅನುಮೋದನೆ ನಿರೀಕ್ಷಿಸಿ ವಿಸ್ತರಿಸುವುದು".

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಕೋ-ಆಪರೇಟಿವ್ ಸೊಸೈಟಿಯ ಚೆಕ್‌ನಲ್ಲಿ ಕಂದಾಯ ಪಾವತಿಸುವವರ ಆಸ್ತಿ ತೆರಿಗೆಯನ್ನು ಸ್ವೀಕರಿಸಲು ಅನುಮತಿ ನೀಡುವುದು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "2011-12ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿಯಲ್ಲಿ ದಿನಾಂಕ:30-04-2011 ರ ಒಳಗಾಗಿ ಕಂದಾಯ ಪಾವತಿಸುವ ತೆರಿಗೆದಾರರಿಗೆ ಶೇಕಡ 5% ರಷ್ಟು ರಿಯಾಯಿತಿಯನ್ನು ನೀಡಿದ್ದು, ಸದರಿ ರಿಯಾಯಿತಿಯ ಅವಧಿಯು ದಿನಾಂಕ:30-04-2011 ರಂದು ಕೊನೆಗೊಳ್ಳಲಿದ್ದು, ನಗರದ ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ:30-05-2011 ರವರೆಗೆ ಕಂದಾಯ ಪಾವತಿಸುವವರಿಗೆ ತೆರಿಗೆಯಲ್ಲಿ ಶೇಕಡ 5% ರಷ್ಟು ರಿಯಾಯಿತಿಯನ್ನು ಸರ್ಕಾರದ ಅನುಮೋದನೆ ನಿರೀಕ್ಷಿಸಿ ವಿಸ್ತರಿಸುವುದೆಂದು ಹಾಗೂ ಕೋ-ಆಪರೇಟಿವ್ ಸೊಸೈಟಿಯ ಚೆಕ್‌ನಲ್ಲಿ ಕಂದಾಯ ಪಾವತಿಸುವವರ ಆಸ್ತಿ ತೆರಿಗೆಯನ್ನು ಸ್ವೀಕರಿಸಲು ಅನುಮತಿ ನೀಡುವುದೆಂದು ಸಭೆಯು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)
ಮಹಾಪೌರರು